# Little KITEs

LK/2018/11043

# GVHSS MULLERIA

# ಚಿಗುರು

# ಸಂದೇಶ



ಪ್ರಿಯರೇ,

" ಚಿಗುರು " ನಮ್ಮ ಶಾಲೆಯ ಲಿಟಲ್ ಕೈಟ್ಸ್ ವಿದ್ಯಾರ್ಥಿಗಳು ಹೊರತರುತ್ತಿರುವ ಸಂಚಿಕೆ. ಅರಳುವ ಸುಮಗಳ ಪ್ರತಿಭೆ; ಭಾವನಾರೂಪದಲ್ಲಿ ಹೊರಹೊಮ್ಮಿ ಭಾಷೆಯಲ್ಲಿ ಬರೆಯಲ್ಪಟ್ಟು ಸಂಚಿಕೆಯ ರೂಪವನ್ನು ತಾಳಿದೆ. ತಪ್ಪು ಒಪ್ಪುಗಳಿರುವುದು ಸಹಜ. ಆದರೆ ಸ್ರಜನಶೀಲ ಬರಹಗಾರಿಕೆಯ ಈ ಆರಂಭಿಕ ಹೆಜ್ಜೆಗಳು ನಿಜಕ್ಕೂ ಅಭಿಮಾನಪಡತಕ್ಕ ವಿಷಯ. ಮಕ್ಕಳ ಪ್ರತಿಭೆ ಬಾನೆತ್ತರಕ್ಕೆ ಬೆಳೆಯಲಿ ಎಂಬ ಶುಭಹಾರೈಕೆಯೊಂದಿಗೆ,

ಯತೀಶ್ ಕುಮಾರ್ ರೈ

ಮುಖ್ಯೋಪಾಧ್ಯಾಯರು

ಜಿ. ವಿ. ಎಚ್. ಎಸ್. ಎಸ್. ಮುಳ್ಳೇರಿಯಾ

## EDITORIAL BOARD

**Cheif Editor : Yatheesh Kumar Rai.**
**Headmaster**
**Staff Editor : Radhakrishna .M (Staff Secretary)**
**: Raghavendra .K (Sr.Asst)**
**Student Editor : Akash C**

## Members

**DEEKSHITHA .G**

**DISHA .P S**

**MADHURAJ**

**NITHYESHA**

**HITHESH**

**APARNA G NAIR**


**PRAJNA**

# ಅನುಕ್ರಮಣಿಕೆ


ಮರಳಿ ಬಾ........6
ಶ್ರದ್ಧಾಂಜಲಿಮು........7
ಕವಿ ಮನ........8
ಮಳೆ........9
ದೇಶದ ಕೀರ್ತಿ........10
ಅನಾಥ ಬಾಲ್ಯ........11
ನೀರು........12
ಕಾಡು ನಮ್ಮ ಜಗತ್ತು........13
ಮುಸ್ಸಂಜೆಯ ವೇಳೆ........14
ಬೆಳ್ಳಿರಥ........15
ನಮ್ಮ ಕೇರಳ........16
ಪ್ರಕೃತಿ ದಯೆ........17
ನನ್ನ ಮನೆ........18
ದೇಶದ ಹಿರಿಮೆ........19
ಚಿಟ್ಟೆ........20
ಕನ್ನಡಮ್ಮ........21
ಬನ್ನಿ ಸೋದರರೆ........22
ಕಲಿಕೆ........23
ಮಾತೆ ಮಮತೆ........24
ಬಣ್ಣದ ಚಿಟ್ಟೆ........25
ಮಳೆ........26
ಚಿಟ್ಟೆ........27
ಪರಿಸರ ಮಾಲಿನ್ಯ........28
ಅಮ್ಮ........29
ಪರಿಸರದಲ್ಲಿ ತುಂಬುತ್ತಿರುವ ಮಾಲಿನ್ಯ........30
ಪ್ರಕೃತಿ ಮಡಿಲು........31
ಓ ಮಳೆಯೆ........32
ಪ್ರಕೃತಿ........33
ಪಕ್ಷಿಗಳು........34
ನೀರು........35

'ಹೂ' ಗಳು.....36
ಕೇರಳ.....37
ಹಕ್ಕಿ.....38
ಹೂ.....39
ಮುದ್ದಿನ ನಾಯಿ.....40
ಅಂದದ ಚಿಟ್ಟೆ.....41
ಒಂದು ನೀರಿನ ಹನಿ.....42
ಯಶಸ್ವಿ.....43
ಮರ.....44
ಸಮುದ್ರದ ದಡದಲ್ಲಿ.....45
ನಮ್ಮ ಹೆಮ್ಮೆಯ ಭಾರತ.....46
ಮುದ್ದಿನ ಅಮ್ಮ.....47
ರೈತ.....48
ಪ್ರಕೃತಿ.....49
ಆ ರಾತ್ರಿಯಲಿ.....50
ಆಸೆ.....51
ದೇವ ವರ.....52
ಮಗು.....53
ಸಂಜೆಯ ಮೌನ.....54
ಮುಸ್ಸಂಜೆ ವೇಳೆಯಲಿ.....55
ಆಲಯ.....56
ನದಿಯ ನೋಡಿ ಕಲಿ ಹೇ ಮನುಜ.....57
ಮಕ್ಕಳು.....58
ಮಕ್ಕಳು.....59
ಜವಹರಲಾಲ್ ನೆಹರು.....60
ಜೀವನ.....61
ತರೆದಿಟ್ಟ ಕಿಟಿಕಿ.....62
അമ്മയുടെ സ്വാതന്ത്രം.....63
ಸುವರ್ಣ ನಾಡು.....65
ಒಗಟ್ಟಿನ ಮಕ್ಕಳು.....66
ನೆಹರು.....67
ಮುಸ್ಸಂಜೆ.....68

# ಮರಳಿ ಬಾ



ಇನ್ನಿನಿಸು ಕವಿವರ್ಯ ನೀ ಬದುಕಬೇಕಿತ್ತು..
ಈಗ ಕನ್ನಡಕೆ ಅತ್ಯಗತ್ಯವಿದೆ ನಿನ್ನ
ಬಿರುಗಾಳಿಗೆ ಸಿಕ್ಕ ಹಡಗಿನಂತಾಗಿ
ಮಲಯಾಳೀಕರಣದಲಿ ನಲುಗುತಿಹೆವು

ಕನ್ನಡದ ಮಕ್ಕಳಿಗೆ ಮಲಯಾಳಿ ಶಿಕ್ಷಕರು
ಶಿಕ್ಷಕರಲ್ಲಿವರು ಕನ್ನಡದ ಹಂತಕರು
ಗುಣಮಟ್ಟ , ಹೈಟೆಕ್ಕು ಎಲ್ಲರಿಗು ಬೇಡವೇ ?
ಕನ್ನಡದ ಮಕ್ಕಳು ಕೇರಳದವರಲ್ಲವೇ ?


ಕನ್ನಡದ ನೆಲದಲ್ಲಿ ಕನ್ನಡಕೆ ಅನ್ಯಾಯ !
ನಮ್ಮ ಕೂಗಿಗೆ ಇನ್ನು ಸಿಕ್ಕೀತೇ ನ್ಯಾಯ ?
ಎಮ್ಮ ನೋವನು ಇಲ್ಲಿ ಕೇಳುವವರಾರಿಲ್ಲ
ಎಲ್ಲರಿಗು ಸ್ವಾರ್ಥ; ಕನ್ನಡಕ್ಕಿಲ್ಲ ಉಳಿವು..

ಕೈ ಮುಗಿದು ಬೇಡುವೆನು ಮರಳಿ ಬಾ ಕವಿವರ್ಯ
ಕನ್ನಡಿಗರಲಿ ನೆಲೆಸಿ ಕನ್ನಡವ ಉಳಿಸು.

**ರಾಧಾಕೃಷ್ಣ.ಎಂ.**
**ಕನ್ನಡ ಅಧ್ಯಾಪಕರು**



# ಶ್ರದ್ಧಾಂಜಲಿ



ಕನ್ನಡದ ಕವಿವರ್ಯ ಮಂಜೇಶ್ವರ ಪುತ್ರ
ಕನ್ನಡದ ನೆಲದಲ್ಲಿ ನಲೆಸಿರುವ ಪಾತ್ರ
ಕನ್ನಡಿಗರೆದೆಯಲ್ಲಿ ನಿನಗಿಲ್ಲ ಅಂತ್ಯ
ನಿನ್ನಂತ ವಿದ್ವಾಂಸ ಇಲ್ಲಿಲ್ಲ ಸತ್ಯ

ತುಳುತಾಯಿ ಹಡೆದವ್ವ
ಕನ್ನಡವು ಪೊರೆದವ್ವ
ತಾಯಂದಿರಿಬ್ಬರನು ಪಡೆದ
ನೀನು 'ಗೋವಿಂದ' ಪೈ !

ಆದಿಪ್ರಾಸವ ಬಿಟ್ಟು
ತ್ರಾಸವಿಲ್ಲದೆ ಬರೆದೆ
ಕನ್ನಡದ ಕವಿಗಳಿಗೆ
ದಾರಿ ತೋರ್ದೆ




ಸರಸ್ವತಿಯ ವರಪುತ್ರ
ಬಹುಭಾಷಾ ವಿದ್ವಾಂಸ
ರಾಷ್ಟ್ರಕವಿ ,ವಿಶ್ವಕವಿ
ಕವಿಲೋಕ ಜನಕ

ಹೃದಯರಂಗದಿ ನಂದಾದೀಪವುರಿಸಿ ,
ಇಂಗಡಲ ಮೇಲೆ ಗಿಳಿವಿಂಡು ಹಾರಿಸಿದೆ ;
ಹೆಬ್ಬೆರಳು ಕೊಟ್ಟು , ಚಿತ್ರಭಾನುವ ನೀಡಿ ,
ಗೊಲ್ಗೊಥಾ,ವೈಶಾಖಿ , ದೆಹಲಿ , ಪ್ರಭಾಸವನೊರೆದೆ.

ಕನ್ನಡದ ಸಾಹಿತ್ಯ ನಿನ್ನಿಂದ ಶ್ರೀಮಂತ
ಕನ್ನಡದಿ ಯಾರಿಹರು ನಿನಗೆ ಸರಿಸಾಟಿ ?
ನಮ್ಮನಗಲಿದ ದಿನವಿಂದು ಸ್ಮರಿಸುವೆವು
ಸಲ್ಲಿಪೆವು ಗೌರವದಿ ನಿನಗೆ ಶ್ರದ್ಧಾಂಜಲಿ...

ಶ್ರೀ ರಾಧಾಕೃಷ್ಣ.ಎಂ. ಕನ್ನಡ ಅಧ್ಯಾಪಕರು

# ಕವಿ ಮನ



ಮುಂಜಾನೆಯಲ್ಲಿ ಬೆಳಗುವವನು ರವಿ
ಅದನು ವರ್ಣಿಸುವನೀ ಕವಿ
ಜೀವನದ ಮಧ್ಯೆಯಿರುವುದು ಗವಿ
ಅದನು ಬರೆಹದಿಂದೆರಿಸುವನೀ ಕವಿ

ಕವಿಗೆ ಸಂಕಷ್ಟಗಳಿರಬಹುದು
ಆದರೆ ಕವನದ ಸಾಲುಗಳಲ್ಲಿರಲಾರದು
ಮಾನವ ಹೊರಗೆ ನೋಡಿದರೆ ಪ್ರಕೃತಿಯನ್ನಷ್ಟ ನೋಡಬಲ್ಲ
ಆದರೆ ಕವಿ ಹೊರಗೆ ನೋಡಿದರೆ ಪ್ರಪಂಚವನ್ನೇ ನೋಡಬಲ್ಲ

ದೀಕ್ಷಿತ್.ಸಿ.ಎಚ್

# <u>ಮಳೆ</u>

ಮಳೆ ಬಂದಿತು

ಭೂಮಿ ತಂಪಾಯಿತು

ಮರಗಳು ಚಿಗುರಿತು

ತಂಗಾಳಿ ಬೀಸುತಿದೆ



ನದಿ ಕೆರೆಗಳು ತುಂಬಿ ತುಳುಕುತಿದೆ

ಹಕ್ಕಿಗಳ ಚಿಲಿಪಿಲಿ ಕೇಳುತಿದೆ

ಪ್ರಾಣಿಗಳು ನೆಗೆಯುತಿವೆ

ಮಳೆ ಕಾರಣ ಇದು ನಡೆಯುತಿದೆ

ನಾಗೇಶ ಜಿ

# ದೇಶದ ಕೀರ್ತಿ

ಗೆಳೆಯಾ ಗೆಳೆಯಾ ಏಳೋ
ಗೆಲುವು ನಿನದೆ ಕೇಳೋ
ಗೆಲುವಿನ ಮಂತ್ರವ  ಹೇಳೋ
ಸೋಲನು ನೋಡದೆ ಬಾಳೋ

ನಾಡಿಗೆ ತಾರೋ ಕೀರುತಿ
ನಿನಗೆ ನೀನೇ ಸ್ಪೂರ್ತಿ
ನಿನಗೆ ದೇಶದ ಆರತಿ
ನೀನೇ ಚಕ್ರವರ್ತಿ

ಹಿರಿಯರ ಸಲಹೆ ಕೇಳು
ಸೋಲನು ಮರೆತು ಬಾಳು
ಬಿತ್ತು ಜ್ಞಾನದ ಕಾಳು
ಜಗವನು ನೀನೆ ಆಳು



ಮಹಾನ್ ವ್ಯಕ್ತಿಗಳ ನೋಡು
ಅವರಂತೆ ಜೀವನ ಮಾಡು
ಬೆಳಸು ಜ್ಞಾನದ ಕಾಡು
ದೇಶಕೆ ಋಣವ ನೀಡು

ನವನೀತ.ಕೆ.

# **ಅನಾಥ ಬಾಲ್ಯ**

ಬದುಕು ಒಬ್ಬಬ್ಬೊರದು ಒಂದೊಂದು ರೀತಿ
ಜೀವನದ ನೋವು ನಲಿವು ಸೇರಿ
ತಂದೆ ತಾಯಿ ಬಂಧು ಬಳಗದ ಪ್ರೀತಿ
ದಿನ ದಿನವೂ ಹೊಸ ಹರುಷದ ಹಾದಿ
ಆದರೆ ಭಿನ್ನ ಕೆಲವು ಅನಾಥ ಬದುಕು
ಸುಖ ಸಂತೋಷ ಅವರಿಗೆ ಬರಿ ಕನಸು
ಕಷ್ಟ ಕಾರ್ಪಣ್ಯಗಳು ಅವರ ನೆರಳು
ಎಲ್ಲಿಯೂ ಇಲ್ಲ ಅವರಿಗೆ ಇರವು
ಎಲ್ಲರಿಗೂ ಹಕ್ಕು ಸರಿ ಸಮಾನ ಇಲ್ಲಿ
ಅದಕ್ಕೆ ಬೇಕು ನಮ್ಮೆಲ್ಲರ ಮನಸ್ಸು ಸೇರಿ



ಪ್ರತೀಕ್ ರಾವ್ ಕೆ.ಬಿ

# ನೀರು

ಮುತ್ತು ರತ್ನಗಳು ಎಷ್ಟೋ ಅಮೂಲ್ಯ
ಅದಕ್ಕಿಂತ ನೀರೇ ನಮಗೆ ಅಮೂಲ್ಯ
ನೀರಿಲ್ಲದ ಬದುಕನ್ನು ಆಲೋಚಿಸಲು ಅಸಾಧ್ಯ
ನೀರನ್ನು ಕಾಪಾಡಬೇಕಾದುದು ನಮ್ಮ ಕರ್ತವ್ಯ

ಕೆರೆ ಬಾವಿಗಳು ನೀರಿನ ಮೂಲ
ಅವುಗಳೇ ಶುದ್ಧಜಲದ ಮೂಲ
ಮಳೆಗಾಲದಲ್ಲಿ ಅದನ್ನು ನೋಡಲು
ಎಷ್ಟೊಂದು ಸೊಬಗು

ಸುರಂಗಗಳ ನೀರೆ ಶುದ್ಧಜಲ
ಅದು ನಮಗೆ ಹಾನಿಕಾರಕವಲ್ಲ
ಆದರೆ ಇಂದು ಅವುಗಳೇ ಇಲ್ಲ
ಇಂದಿರುವುದು ಬರೇ ಕೃತಕ ಜಲ



ಶಶಾಂಕ್.ಪಿ.ಜಿ

# ಕಾಡು ನಮ್ಮ ಜಗತ್ತು



ಕಾಡು ಮಾನವರನ್ನು ಕಾಪಾಡು
ನೀನೆ ಪ್ರಾಣಿಪಕ್ಷಿಗಳ ನೆಲೆಬೀಡು
ನೀನು ಜಗತ್ತನ್ನು ಪರಿವರ್ತನೆ ಮಾಡು
ಆಗ ಮಾನವರ ಸಂತಸವನ್ನು ನೋಡು

ಹೊಸ ಚಿಗುರಿನ ಮರಗಳ ನೋಟ
ನಮಗದು ನೋಡುವುದು ಸಂತಸದ ಸವಿಯೂಟ
ಇಂಪಾಗಿ ಹಾಡುವ ಕೋಗಿಲೆಯ ಕಂಠ
ಇದುವೇ ನಮಗೆ ಆನಂದದ ಸವಿನೋಟ

ನಿನ್ನಿಂದಾಗಿ ಬರುತ್ತದೆ ಮಳೆ
ಬಯಲಲ್ಲಿ ಬೆಳೆಯುತ್ತದೆ ಕಳೆ
ಮಕ್ಕಳ ಮೈಯಲ್ಲೆಲ್ಲ ಕೊಳೆ
ನಿನ್ನನ್ನು ಹೊತ್ತಿರುವವಳೇ ಇಳೆ

ನಿನ್ನಿಂದಾಗಿಯೇ ಪ್ರಪಂಚವೆಲ್ಲ
ನೀನಿಲ್ಲದಿದ್ದರೆ ಪ್ರಪಂಚವಿಲ್ಲ
ನಿನ್ನನ್ನು ನಾಶ ಮಾಡುವುದು ಸರಿಯಲ್ಲ
ಮಾನವರಿಗೆ ನೀನೆ ಎಲ್ಲ

ಗೋಕುಲ್.ಎಚ್

# ಮುಸ್ಸಂಜೆಯ ವೇಳೆ



ಮುಸ್ಸಂಜೆಯ ವೇಳೆಯಿದು
ಇರುಳು ಕತ್ತಲೆಯ ಮುನ್ಸೂಚನೆಯಿದು
ಹೊಂಬೆಳಗಿಸಿ ಮುಳುಗುವನು ಸೂರ್ಯನು

ಬೆಟ್ಟ ಗಿರಿಗಳ ನಡುವೆ ಮರೆಯುವನು
ಇರುಳಲ್ಲಿ ಅಡಗುವನವನು
ತೆಂಗುಗರಿಗಳ ನಡುವೆ ಮೆಲ್ಲಗೆ  ಮಿನುಗುವನು

ಪ್ರಾಣಿಪಕ್ಷಿಗಳು ಥಾನಕ್ಕೆ ಹೊರಡಿದವು
ನವಿಲುಗಳು ನರ್ತನವ ಕೊನೆಗೊಳಿಸಿದವು
ಅತಿ ಸುಂದರ ದೃಶ್ಯವಿದು ಮುಸ್ಸಂಜೆ

ಸತ್ಯರಾಜ್.ಬಿ

# ಬೆಳ್ಳಿ ರಥ

ಆಕಾಶದಲಿ ಒಂದು ಬೆಳ್ಳಿಯ ರಥ

ಮೊಡದ ಅಂಚಿನಲಿ

ಅಡಗುವನು ಚಂದ್ರ

ಗಾತ್ರವ ಬದಲಾಯಿಸುವನು ಚಂದ್ರ

ನಿನ್ನಯ ಬೆಳಕು ಎಲ್ಲೆಡೆ ಚೆಲ್ಲಿದೆ

ನಿನ್ನನು ನೋಡಲು ಎಷ್ಟು ಸುಂದರ

ಬಿತ್ತರದಾಗಸದಲಿ ನೀನಿರುವೆ

ತಾರೆಯೊಂದಿಗೆ ನೀನಿರುವೆ

ನಿನ್ನನು ನೋಡಲು ಎಷ್ಟು ಸುಂದರ

ಅಖಿಲ್ ಕೆ.ಎನ್



# ನಮ್ಮ ಕೇರಳ

ಹಕ್ಕಿಗಳ ವಾಸಸ್ಥಳ ನಮ್ಮ ಕೇರಳ
ಸಾಕ್ಷರತೆಯಲಿ ಮುಂದಿರುವ ಪುಣ್ಯ ಕೇರಳ
ಮುಕ್ಕೋಟಿ ದೇವರ  ಪುಣ್ಯ ಸಾಗರ
ಕೇರಳೀಯ ಮಣ್ಣಿನಲ್ಲಿ ನಮ್ಮ ಜೀವನ

ಸ್ವಾತಂತ್ರ್ಯದಿಂದಿರುವ ನಮ್ಮ ಜೀವನ
ಇಂದು ತುಟ್ಟಿಯಾಗಿ ಬಿಟ್ಟಿದೆ
ಪ್ರಜಾಪ್ರಭುತ್ವದಲ್ಲಿ ನಮ್ಮ ಕೇರಳ
ಭಾರತದ ದಕ್ಷಿಣದಲ್ಲಿ  ನಮ್ಮ ಕೇರಳ

ವಿಷ್ಣು.ಕೆ



# ಪ್ರಕೃತಿ ದಯೆ

ಪ್ರಕೃತಿಯೆ ದಯತೋರಿ ಕರುಣಿಸು
ನನಗೊಂದು ಉತ್ತಮ ಜೀವನವ
ಕ್ಷಮಿಸು ನೀ ನನ್ನಯ ಎಲ್ಲಾ
ನಿನ್ನ ಮೇಲೆ ಮಾಡಿದ ತಪ್ಪುಗಳ
ನೀ ಕೊಟ್ಟೆ ಹೊಟ್ಟೆ ತುಂಬಲು
ಅನ್ನವ
ನಾ ಬಗೆದೆ ನಿನ್ನ ಸಂಪತ್ತಿಗೆ ಕನ್ನವ
ನೀ ನೆಲ,ಜಲ ಸಂಪತ್ತು ಕೊಟ್ಟೆ
ನಾ ನಿನ್ನ ಮುಂದೆ ಬರಿ ಕಷ್ಟಗಳ ಇಟ್ಟೆ
ನಶಿಸಿದೆ ನಿನ್ನ ಎಲ್ಲಾ ಸಂಪತ್ತನ್ನು
ಗೊಳಿಸಿದೆ ಮಲಿನ,ಶುದ್ಧ ಗಾಳಿ,ಜಲ,ನೆಲವನು
ಮುಂದೆಂದೂ ಮಾಡೆನು ಈ ತಪ್ಪುಗಳ
ಕರುಣಿಸು ನೀ ನನಗೆ ಜೀವನದ ಸುಖ ಶಾಂತಿಗಳ



ಜ್ಯೋತಿ ಎ

# <u>ನನ್ನ ಮನೆ</u>

ಮನೆ ಮನೆ ಮನೆ

ನನ್ನ ಮುದ್ದು ಮನೆ

ನಾವು ವಾಸಿಸುವ ಮನೆ

ಸುರಕ್ಷಿತವಾದ ಮನೆ

ಮಕ್ಕಳನ್ನು ಒದ್ದೆ ಮಾಡದ ಮನೆ

ತಂಪು ಬಿಸಿಯನು ನೀಡುವ ಮನೆ

ಬಣ್ಣ ಬಣ್ಣದ ಮನೆ

ಚಂದ ಚಂದದ ಮನೆ

ಶುಭಲಕ್ಷ್ಮಿ



# ದೇಶದ ಹಿರಿಮೆ

ಎದೆ ಉಬ್ಬರಿಸುವ ಯೋಧರರಾಷ್ಟ್ರ
ಈ ರಾಷ್ಟ್ರವೆ ನಮಗೆ ಶ್ರೇಷ್ಠ
ಭಾರತ ದೇಶವು ಸಂಪದ್ಭರಿತ
ಇಲ್ಲಿಲ್ಲ ನಂಬಿಕೆಯ ಮುರಿತ

ಇಲ್ಲಿ ಜನಿಸುವ ಮಾಡಿಹೆವು ಪುಣ್ಯ
ಈ ದೇಶವು ಸುಖ ಶಾಂತಿಗಳ ನಾಣ್ಯ
ಅತ್ತ ಕಾಶ್ಮೀರ ಇತ್ತ ಕೇರಳ
ಎಲ್ಲೆಡೆಯೂ ಸೌಹಾರ್ದದ ಹೇರಳ

ನಾನು ನೀನೆಂಬ ಭೇದಸಲ್ಲ
ಪ್ರೀತಿ ವಿಶ್ವಾಸ ಎಲ್ಲ
ಬನ್ನಿ ತಿಳಿಯೋಣ ನಾವೆಲ್ಲ
ಭಾರತಾಂಭೆಯ ಅಂತರಾಳವ ಮೆಲ್ಲ

ಪ್ರಾರ್ಥನ ಪಿ



# ಚಿಟ್ಟೆ

ಚಿಟ್ಟೆ ಚಿಟ್ಟೆ ಬಣ್ಣದ ಚಿಟ್ಟೆ
ಪುಟ್ಟ ರೆಕ್ಕೆಯ ಚಿಕ್ಕ ಚಿಟ್ಟೆ
ಹಿಡಿಯಲು ಬಂದರೆ ಹಾರಿಯೇ ಬಿಟ್ಟೆ
ಚಿಟ್ಟೆ ಚಿಟ್ಟೆ ಬಣ್ಣದ ಚಿಟ್ಟೆ

ಹಾರುತ ಹಾರುತ ದೊರಕೆ ಹಾರುವೆ
ಹೊಗಳ ಮೇಲೆ ಕುಳಿತೆ ಬಿಟ್ಟೆ
ಹತ್ತಿರ ಬರಲು ಪುನಃ ಹಾರುವೆ
ಚಿಟ್ಟೆ ಚಿಟ್ಟೆ ಬಣ್ಣದ ಚಿಟ್ಟೆ



ಸಾಗುತ ಸಾಗುತ ದೊರಕೆ ಸಾಗುತ
ಹಿಂದೆಯ ನಾ ಓಡುತ ಬಂದೆ
ನಿನ್ನಯ ಅಂದವ ನೋಡುತ ಬಂದೆ
ಚಿಟ್ಟೆ ಚಿಟ್ಟೆ ಬಣ್ಣದ ಚಿಟ್ಟೆ

ಅಂದವ ನೋಡುತ ಕುಳಿತೆ ಬಿಟ್ಟೆ
ಸಮಯದ ಓಟವ ಮರೆತೆ  ಬಿಟ್ಟೆ
ಆಟ ಪಾಠಗಳ ಬಾಕಿ ಇಟ್ಟೆ
ಚಿಟ್ಟೆ ಚಿಟ್ಟೆ ಬಣ್ಣದ ಚಿಟ್ಟೆ

ಧನ್ಯ ಬಿ

# <u>ಕನ್ನಡಮ್ಮ</u>




ಓ ಕನ್ನಡ ಕಂದ
ಸವಿಮಾತೊಂದು ಹೇಳುವೆ
ಅಕ್ಕರೆಯಿಂದ

ಡ್ಯಾಡಿ ಅಮ್ಮ ಎಂಬ
ಮೋಹದ ನುಡಿಗೆ ಮರುಳಾಗದಿರು
ಬಣ್ಣ ಬಣ್ಣದ ವೇಷ ಭೊಷಣಕೆ
ಸೊಟು ಬೂಟಿನ ಆಡಂಬರಕೆ

ಮರಳು ಮಾತಿನ ಮಾತೃದ್ರೋಯಿಗಳ
ಬಲಿಗೆ ಬೀಳದಿರು
ಹೆತ್ತವರು ತಾ ಕುರುಡಿಯೆಂದು
ಆಂಗ್ಲರ ರೂಪ ಲಾವಣ್ಯಕ್ಕೆ
ಬಲಿಯಾಗದಿರು

ಹಾಲುಣಿಸಿದ ಹೆತ್ತಮ್ಮ
ಕನ್ನಡಮ್ಮ ಎಂಬುದು
ಮರೆಯದಿರು ಕಂದ

ಚರಣ್ ಎಮ್.ಎ

# ಬನ್ನಿ ಸೋದರರೆ




ಬನ್ನಿ ಸೋದರರೆ ಬನ್ನಿ ಬಾಂಧವರೆ
ಹೃದಯ ಹೃದಯಗಳ ಬೆಸೆಯೋಣ
ವಸುಧಾ ಕುಟುಂಬ ರಚಿಸೋಣ
ಮೊಳಗಲಿ ತಾಯ ಯಶೋಗಾನ

ಕೊರತೆ ಕಷ್ಟಗಳ ನೆಳೆದಳೆದು
ಸರಿಯುತ್ತರ ಸುರಿಮಳೆಗರೆದು
ಸಂಘಟನಾ ಬಲ ನಿರ್ಮಾಣ
ವಿಶ್ವಸಂತತಿಯ ಕಲ್ಯಾಣ

ಅಭಿರಾಮ ಎನ್

## ಕಲಿಕೆ

ನಡೆದಷ್ಟು ದಾರಿಯಿದೆ
ಪಡೆದಷ್ಟು ವಿದ್ಯೆಯಿದೆ
ಕಲಿತಷ್ಟು ವಿದ್ಯೆಯಿದೆ
ಪ್ರಯತ್ನ ವಿದ್ದಷ್ಟು ಫಲವಿದೆ
ನಗುವಿದ್ದಷ್ಟು ದುಃಖವಿದೆ
ಬೆಳಕ್ಕಿದ್ದಷ್ಟು ಕತ್ತಲಿದೆ
ಸೋಲಿದ್ದಷ್ಟು ಗೆಲುವಿದೆ
ಮನಸಿದ್ದಷ್ಟು ಭಾಗ್ಯವಿದೆ
ಎಣಿಸಿದ್ದಷ್ಟು ನಕ್ಷತ್ರ ವಿದೆ
ಮನಸಿದ್ದಷ್ಟು ಮಾರ್ಗವಿದೆ
ಅಗೆದ್ದಷ್ಟು ಆಳವಿದೆ
ಬರೆದ್ದಷ್ಟು ಕವನವಿದೆ
ಬನ್ನಿ ಕಲಿಯಲು ಕನ್ನಡ ಭವನವಿದೆ



ಅಕ್ಷತ ಎಮ್ ಶೆಟ್ಟಿ

## ಮಾತೆ_ಮಮತೆ

ನಿನ್ನ ದುಃಖವ ಮರೆತು
ನೋವು ಕಷ್ಟವ ಸಹಿಸಿ
ಪ್ರೀತಿಯ ನುಡಿ ಮಾತನ್ನು ಕಲಿಸಿ
ಸಾಕಿದೆ ನೀ ನನ್ನ ಮಮತೆ

ನೀತಿ ಪಾಠಗಳನ್ನು ಕಲಿಸಿ
ಬೆಳಕಿನ ದಾರಿಯ ತೋರಿಸಿ
ಸತ್ಯ ಮಾತುಗಳನ್ನು ನುಡಿಸಿ
ಮುಂದೆ ಸಾಗಿಸಿದೆ ನೀನನ್ನ ಮಾತೆ

ಫಾತಿಮತ್ ಸಜೆನ



# ಬಣ್ಣದ ಚಿಟ್ಟೆ



ಚಿಟ್ಟೆ ಚಿಟ್ಟೆ ಬಣ್ಣದ ಚಿಟ್ಟೆ
ಹಾರಿತು ನೋಡು ಪುಟ್ಟ ಚಿಟ್ಟೆ
ಪಕ್ಕವು ಇಲ್ಲ ಬಣ್ಣದ ಚಿಟ್ಟೆ
ನೋಡುವವರ ಕಣ್ಣಿಗೆ ಅಂದವ ಕೊಟ್ಟೆ

ಅಲ್ಲಂದಿಲ್ಲಿಗೆ ಹಾರುವ ಚಿಟ್ಟೆ
ಹೂವನ್ನು ಮೂಸಿ ರಸವನ್ನು ಹೀರುವ
ಬಣ್ಣ ಬಣ್ಣ ಚಿಟ್ಟೆ
ಚಿಟ್ಟೆ ಚಿಟ್ಟೆ ಬಣ್ಣದ ಚಿಟ್ಟೆ

ತರ ತರ ಬಣ್ಣವಿರುವ ಚಿಟ್ಟೆ
ಹಿಡಿಯಲು ಹೋದರೆ ಹಾರುವ ಚಿಟ್ಟೆ
ಚಿಟ್ಟೆ ಚಿಟ್ಟೆ ಬಣ್ಣದ ಚಿಟ್ಟೆ

ಎಳೆಯರಿಗಂದವ ತರಿಸುವ ಚಿಟ್ಟೆ
ಮನಸ್ಸಿಗೆ ಆನಂದವ ನೀಡುವ ಚಿಟ್ಟೆ
ಕೆಂಪಿನ ಚಿಟ್ಟೆ ಹಳದಿಯ ಚಿಟ್ಟೆ
ಚಿಟ್ಟೆ ಚಿಟ್ಟೆ ಬಣ್ಣದ ಚಿಟ್ಟೆ

ಮಧುಶ್ರೀ ಜಿ.ಪಿ

# ಮಳೆ



ಮಳೆ ಬಂತೊಂದು ಮಳೆ
ಬಿಡಿಸಿದೆ ನಾನು ಕೊಡೆ
ಕಂಗೊಳ್ಳುತ್ತಿದೆ ಇಳೆ
ಕೊಡಲಿಲ್ಲ ಶಾಲೆಗೆ ರಜೆ

ತುಂಬಿತು ನೀರು ಬಾವಿಯಲ್ಲಿ
ತುಳುಕಿತು ನೀರು ತೋಡಿನಲ್ಲಿ
ನನ್ನ ಮನಸ್ಸು ನಾಕದಲ್ಲಿ
ನೀರೆಂಬ ರತ್ನದ ನೋಟದಲ್ಲಿ

ನಿಖಿಲ್ ಕೃಷ್ಣ

# ಚಿಟ್ಟೆ



ಚಿಟ್ಟೆ ಚಿಟ್ಟೆ ನನ್ನಯ ಚಿಟ್ಟೆ
ತರ ತರ ಬಣ್ಣದಿ ನೀನಿರುವೆ
ಬಗೆ ಬಗೆ ಹೂಗಳ ಸುತ್ತಲು
ಹಾರುತ
ರಿಂಗಣ ಕುಣಿತವು ಹಾಕುವೆ ನೀನು

ರಿಂಗಣ ಕುಣಿತವ ಹಾಕಿ ನೀನು
ಸುಖ ಸಂತೋಷವ ಕೊಡುವೆ ನೀ
ಎಲ್ಲರ ಮನವನ್ನು ಖುಷಿಯಿಂದ
ತೇಲಿಸುತ್ತ ಇರುವೆ ನೀ

ಚಿಟ್ಟೆಯ ಕುಣಿತವು ಕಂಡು ನಾವು
ರಿಂಗಣ ಕುಣಿತವು ಹಾಕುವೆವು
ಕುಣಿದು ಕುಣಿದು ನಾವೆಲ್ಲರೂ
ಸಂತೋಷದಿಂದ ಬಾಳುವೆವು

ಆಯಿಷತ್ ಸಭಾನಾ

# ಪರಿಸರ_ಮಾಲಿನ್ಯ

ನಮ್ಮ ನಾಡು ನಮ್ಮ ಊರು
ಮಾಲಿನ್ಯದಿಂದ ತುಂಬಿದೆ
ಕಾಡು ಮರ ಗಿಡಗಳೆಲ್ಲ
ದೂರ ದೂರ ಸಾಗಿದೆ



ಮಲಿನ ಜಲವ ಕುಡಿದು ಹಲವು
ರೋಗಗಳಿಗೆ ತುತ್ತಾಗಿದೆವು ನಾವು
ಪ್ರಾಣಿ ಪಕ್ಷಿಗಳ ಮನೆ ಕಡಿದು
ನಾಶ ಮಾಡಿದೆವು ನಾವು

ಕಾಡು ಉಳಿಸಿ ನಾಡು ಬೆಳೆಸಿ
ಮುಂದಿನ ಜೀವನ ಸುಖವಾಗಿಸಿ
ಹಸಿರು ವನವ ಮಾಡಿ
ಸುಖ ಶಾಂತಿಯಿಂದ ಮುಂದೆ ಸಾಗಿ

ಸಫೀಲ ಪಿ.ಮ್

# ಅಮ್ಮ



ಅಮ್ಮ ಅಮ್ಮ ನನ್ನಮ್ಮ
ಮುದ್ದಿನ ಪ್ರೀತಿಯ ನನ್ನಮ್ಮ
ಮಕ್ಕಳ ಸಾಕಿ ಸಲಹುವ ಅಮ್ಮ
ಜ್ಞಾನ ಜ್ಯೋತಿಯು ನೀನಮ್ಮ

ಕಥೆಯನ್ನು ಹೇಳುವ ನೀನಮ್ಮ
ಜೋಗೋಳ ಹಾಡಿಸುವೆ ನೀನಮ್ಮ
ಅನ್ನದ ತುತ್ತನು ಬಾಯಿಗೆ ನೀಡಿ
ತಿನ್ನಿಸುವವಳು ನೀನಮ್ಮ

ನೀತಿ ಪಾಠವ ಹೇಳುವೆ ನೀನು
ನೀನು ಎಂದರೆ ನನಗಿಷ್ಟ
ನೀನೆ ನನಗೆ ದೇವರಮ್ಮ
ನಿನನ್ನು ಬಿಟ್ಟು ಇರಲಮ್ಮ

ಮೇಘ. ಕೆ

# ಪರಿಸರದಲ್ಲಿ ತುಂಬುತ್ತಿರುವ ಮಾಲಿನ್ಯ

ಎಲ್ಲಿ ನೋಡಿದರೂ ಮಾಲಿನ್ಯ
ಮನೆಯಿಂದ ಹೊರಗಿಳಿದರೆ
ಮಾಲಿನ್ಯ ನಮ್ಮ ಪರಿಸರವು
ಹೋಗುತ್ತದೆ ಮಾಲಿನ್ಯದ
ಗುಂಡಿಗೆ



ಇದರಿಂದ ಬರುವ ರೋಗಗಳು
ಮನುಷ್ಯನನ್ನು ಮತ್ತು ಜೀವ
ಜಾಲಗಳನ್ನು ಕೊಲ್ಲುತ್ತದೆ
ನೀರಿನಲ್ಲಿ ಹೊಸ ಹೊಸ ರೋಗಗಳು

ಗಾಳಿಯಲಿವೆ ಮದ್ದಿಲ್ಲದ
ಹೊಸ ಹೊಸ ರೋಗಗಳು
ಎಲ್ಲರಿಗೂ ಭಾದಸುತ್ತದೆ
ಹೊಸ ಹೊಸ ರೋಗಗಳು

ಆದುದರಿಂದ ಎಸೆಯದಿರಿ
ಪ್ಲಾಸ್ಟಿಕ್ ಮುಂತಾದವು
ಪರಿಸರವು ನಮ್ಮ ಸಂಪತ್ತು
ಮರೆಯದರಿ ಇದನ್ನು

ಸಚಿನ್ ಎನ್ ಎಸ್

# ಪ್ರಕೃತಿ ಮಡಿಲು

ಈ ಪ್ರಕೃತಿಯ ಮಡಿಲಲಿ
ಮಲಗುವೆ ನಾವೇ ಪುಣ್ಯವಂತರು
ಇದರ ಜೀವನವೇ
ನಮ್ಮ ಕಣಕಣದ ಉಸಿರು

ಲೋಕದ ಜೀವಜಾಲಗಳಿಗೆ
ಸದಾ ತಾಯಿಯಾಗಿ ಇರು ನೀನು
ಮಕ್ಕಳ ತಪ್ಪನು ಕ್ಷಮಿಸಿ
ಸಲಹು ಅವರನ್ನು



ಗಿಡಮರ ಬಳ್ಳಿಗಳಿದ್ದ
ಸಮೃದ್ಧವಾದ ಪ್ರಕೃತಿ
ನಾಶ ಮಾಡದಿರಿ ಈ
ಪ್ರಕೃತಿಯ ಮಡಿಲನ್ನು

ನಿಕ್ಷಿತ

# ಓ ಮಳೆಯೆ

ಮಳೆಯೇ..........ಮಳೆಯೇ

ಬಾ ಬೇಗನೆ

ನೀನಿಲ್ಲದೆ ಈ ಭೂಮಿ

ಆಗಿ ಬಿಟ್ಟಿದೆ ಮರು ಭೂಮಿ



ಈ ಬಿಸಿಯ ನಾ ತಡೆಯಲಾರೆ

ನೀರಿಲ್ಲದೆ ನಾ ಬದುಕಲಾರೆ

ಬಾ ನೀನು ಭುವಿಗೆ

ತಂಪಾಗು ಮನಕೆ

ನೀ ಬರುವ ಸಮಯ

ಎಲ್ಲರಿಗೂ ಆನಂದಮಯ

ನೀ ಹೋಗುವ ಸಮಯ

ಎಲ್ಲರೂ ದುಃಖಮಯ

ನೀ ಜೋರಾಗಿ ಬಂದರೆ

ಕೃಷಿಕರಿಗೆ ತೊಂದರೆ

ನೀ ಬರದೆ ಇದ್ದರೆ

ಇಡೀ ಜಗಕೆ ತೊಂದರೆ

ಪ್ರಖ್ಯಾತ್ ಡಿ ಶೆಟ್ಟಿ

# ಪ್ರಕೃತಿ

ನೀರು ಎಂಬುದು ನಮ್ಮ ಜೀವನ
ನೀರಿನಿಂದಲೇ ನಾಡು ಬೆಳೆಯುವುದು
ನೀರಿನಿಂದಲೇ ಜನರ ಜೀವವು
ನೀರು ಇಲ್ಲದೆ ಜೀವವಿಲ್ಲ

ಮಳೆಯೇ ಓ ಮಳೆಯೇ ನೀ ಮಾತಾಡು
ಇಂದಿನ ಮಳೆಯೇ ನಾಳೆಯ ನೀರು
ನೀರೇ ಓ ನೀರೇ ನೀ ಮಾತಾಡು
ನೀರೇ ಓ ನೀರೇ ನೀ ಬೇಗನೆ ಬಾ

ಬಂದಿತು ಬಿರುಗಾಳಿ ಮನದಲ್ಲಿ
ಸಿಕ್ಕಿತು ಚಳಿಗಾಳಿ ಒಡಲಲ್ಲಿ
ಎಲ್ಲರ ಮನ ಖುಷಿ ಖುಷಿ
ಕುಡಿದೆನು ಚಹಾ ಬಿಸಿ ಬಿಸಿ

ಆದಿತ್ಯ ಶೆಟ್ಟಿ



# ಪಕ್ಷಿಗಳು

ಅಂದ ಚೆಂದದ ಪಕ್ಷಿಗಳು
ಬಣ್ಣ ಬಣ್ಣದ ಪಕ್ಷಿಗಳು
ಮನೆ ಮನೆಗಳನ್ನು ಶುಚಿಗೊಳಿಸುವ ಪಕ್ಷಿಗಳು
ಕಾಗೆ ಗಿಳಿ  ಎನ್ನುವ ಪಕ್ಷಿಗಳು
ಚಂದ ಚಂದದ ಪಕ್ಷಿಗಳು
ಊರಿಗೆ ಉಪಕಾರಿಯಾಗುವ ಪಕ್ಷಿಗಳು

ಫಾತಿಮತ್ ಅಜಿನ



# ನೀರು

ಹಚ್ಚ ಹಸುರಿನ ಭೂಮಿಯಿದು
ಬೆಟ್ಟ ಗುಡ್ಡಗಳ ನಾಡಿದು
ಸುಂದರದ ನೋಟವಿದು ಕಣ್ಣಿನಲ್ಲಿ

ನೀರಿಲ್ಲದೆ ಭೂಮಿಯಿಲ್ಲ
ಭೂಮಿಯಿಲ್ಲದೆ ನೀರಿಲ್ಲ
ಹಚ್ಚ ಹಸುರಿನ ಈ ನಮ್ಮ ಭೂಮಿ

ಬರೆಗಾಲ ಬಂದಾಗ
ನದಿಗಳು ಬತ್ತಿ ಹೋದಾಗ
ಭೂಮಿಯನ್ನು ತಣಿಸುವುದು ನೀರು

ಅಜೇಶ್ ಎ.ಕೆ



## 'ಹೂ' ಗಳು

ಹೂವು ಹೂವು ಹೂವು

ಅಂದ ಚೆಂದದ ಹೂವು

ಪೂಜೆಗೆ ಇಡುವ ಹೂವು

ಹೂವು ಹೂವು ಹೂವು

ತೋಟದಲ್ಲಿ ಅರಳುವ ಹೂವು

ನೋಡಲು ಎಷ್ಟು ಅಂದ ಚಂದ

ಬಣ್ಣ ಬಣ್ಣದ ಹೂಗಳು

ಹಳದಿ ಕೆಂಪು ಹೂವುಗಳು

ಎಲ್ಲರ ಮನೆಯಲ್ಲಿ ಅರಳುವ ಹೂವು

ಕಾಣಲು ಚಂದ ಗುಲಾಬಿ ಹೂವು

ನಾವು ಮುಡಿಯುವ ಮಲ್ಲಿಗೆ ಹೂವು

ಹೂವು ಹೂವು ಹೂವು

ಭವ್ಯಶ್ರೀ ಎಮ್



# **ಕೇರಳ**

ಕೇರ ವೃಕ್ಷಗಳ ನಾಡು
ಇದುವೇ ನಮ್ಮ ಬೀಡು
ರೈತರ ನಾಡಿದು
ಸಜ್ಜನರ ಊರಿದು
ವಿದ್ಯಾಭ್ಯಾಸದಲ್ಲಿ ಮುಂದಿಹೆವು
ಒಟ್ಟಾಗಿ ನಾವು ಬೆಳೆಯುವೆವು
ಹಲವು ಭಾಷೆಗಳನ್ನು ಮಾತನಾಡುವೆವು
ದೇವರ ಸ್ವಂತ ನಾಡಿನಲಿ

ಚೇತನ್ ಶೆಟ್ಟಿ



# ಹಕ್ಕಿ

ನಾನೊಂದು ಹಕ್ಕಿಯಾಗಿದ್ದರೆ
ವಿಶಾಲವಾದ ಆಕಾಶದಲ್ಲಿ ಹಾರಾಡುತಿದ್ದೆ
ಕಾಡಿನಲ್ಲಿ ಆಹಾರ ಹುಡುಕಿದರೂ
ನನ್ನ ಬದುಕಿಗೆ ಕುಂದು ತರುತ್ತಿರಲಿಲ್ಲ



ಊರೂರು ಸುತ್ತಾಡಿ
ಪ್ರಕೃತಿಯನ್ನು ಆಸ್ವಾದಿಸುತಿದ್ದೆ
ನಿದ್ದೆಯಲ್ಲಿದ್ದ ಮಾನವನಿಗೆ
ಮಧುರ ನಾದದ ಮೂಲಕ ಬೆಳಗಾದುದನ್ನು ತಿಳಿಸುತಿದ್ದೆ

ಮರದ ಮೂಲೆಯಲ್ಲಿ
ಗೂಡನ್ನು ಕಟ್ಟಿ ಮೊಟ್ಟೆಯನ್ನು ಸಲಹುತ್ತಿದ್ದೆ
ಮರಿಗಳಿಗೆ ಜೀವನದ
ಗುಟುಕು ಕೊಟ್ಟು ಬೆಳೆಸುತಿದ್ದೆ

ಇತರರಿಗೆ ಉಪದ್ರ ಮಾಡದೆ
ತನ್ನ ಪಾಡಿಗೆ ಬದುಕುತಿದ್ದೆ
ಮುಳುಗುವ ಸೂರ್ಯನನ್ನು ಕಂಡು
ಗೂಡಿಗೆ ಸಾಗುವಂತೆ ಬಳಗದವರನ್ನು ಎಚ್ಚರಿಸುತಿದ್ದೆ

ರಾತ್ರಿಯಾದಾಗ ಗೂಡಿನಲ್ಲಿ
ಸಂತೋಷದಿಂದ ನಿದ್ರಿಸುತ್ತಿದ್ದೆ

ಗಿರೀಶ ನಾಯ್ಕ್ ಪಿ

# ಹೂ

ಹೂವೇ ಹೂವೇ ಅಂದದ ಹೂವೇ
ಪರಿಮಳ ಸೂಸುವ ಹೂವೇ
ಮುಂಜಾನೆ ಅರಳುವ ಹೂವೇ
ಸಂಜೆ ಮುದುಡುವ ಹೂವೇ

ಗುಲಾಬಿ, ಸೇವಂತಿಗೆ, ಮಲ್ಲಿಗೆ ಹೂವೇ
ಅಂದದ ಚಂದದ ಹೂವೇ
ಕೆಂಪು, ಹಳದಿ, ಬಿಳಿ ಬಣ್ಣದ ಹೂವೇ
ಮನೋಹರ



ತರತರದ ಹೂವೇ
ಬಣ್ಣ ಬಣ್ಣದ ಹೂವೇ
ಗಿಡದಲ್ಲಿರುವುದು ಚಂದ
ಸ್ತ್ರೀಯರ ತಲೆಯಲ್ಲಿರುವುದು ಅಂದ

ಹರಿಣಾಕ್ಷಿ ಕೆ

# ಮುದ್ದಿನ ನಾಯಿ

ದೇಶ ಕಾಯೋ ಯೋಧನಂತೆ ನೀನು
ನಿನ್ನ ನೋಡಿದ ಕ್ಷಣ ಭಯ ಎಂಬ ಭಾವನೆ ಮೂಡಿತು
ರಾತ್ರಿ ಹೊತ್ತಿನ ಯೋಧ ನೀ

ತಂತ್ರಜ್ಞಾನಕ್ಕಿಂತ ವೇಗ ನಿನ್ನ ಈ ಕಣ್ಣಿನ ನೋಟ
ಎಲ್ಲರೂ ನಂಬಬಲ್ಲರು ನಿನ್ನನು
ಧೈರ್ಯವೆಂಬ ಧರ್ಮದಲ್ಲಿ ಹುಟ್ಟಿ ಬೆಳೆದೆ ನೀ

ನಿನ್ನ ಧನಿಯ ಭಯವ ಮೂಡಿಸುವುದು
ಸಾಕಿ ಸಲಹಿದವರ ನೀ ಕಂಡಾಗ
ಬಲದಡಿಸಿ ನೀ ಗೌರವ ಸೂಚಿಸುವೆ

ಜ್ಯೋತಿ ಎ



# ಅಂದದ ಚಿಟ್ಟೆ

ಚಿಟ್ಟೆ ಚಿಟ್ಟೆ  ಅಂದದ ಚಿಟ್ಟೆ
ಬಣ್ಣ ಬಣ್ಣದ ಚಿಟ್ಟೆ
ತರ ತರ ಬಣ್ಣದ ಚಿಟ್ಟೆ

ಹೂವಿಂದ ಹೂವಿಗೆ ಹಾರುವ ಚಿಟ್ಟೆ
ಹಿಡಿಯಲು ಹೋದರೆ ಹಾರುವ ಚಿಟ್ಟೆ
ಹಲವು ರೆಕ್ಕೆಗಳಿರುವ ಚಿಟ್ಟೆ

ಹೂವನ್ನು ಮೂಸಿ ರಸವನ್ನು
ಹೀರುವ ಬಣ್ಣದ ಚಿಟ್ಟೆ
ಎಳೆಯರಿಗೆ ಅಂದವ ತರಿಸುವ ಚಿಟ್ಟೆ

ಮನಸಿಗೆ ಆನಂದವ ನೀಡುವ
ಅಂದದ ಚಂದದ ಚಿಟ್ಟೆ
ಹಳದಿ ಕೆಂಪು ಚಿಟ್ಟೆ

ಮಂಜುಳ



## ಒಂದು ನೀರಿನ ಹನಿ



ಒಂದು ಮಳೆ ಬಿಂದು
ಒಂದು ಮಳೆ ಮೋಡ

ನಾನೊಂದು ನೀರಾದರೆ
ಎಲ್ಲರಿಗೂ ಜೀವ ಕೊಡುವೆ
ಎಲ್ಲರೂ ನನ್ನನ್ನು ಬಯಸುವರು
ಎಲ್ಲರ ಜೀವ ನನ್ನ ಕೈಯಲ್ಲಿ

ಎಲ್ಲರು ಬಯಸುವುದು ನನ್ನನ್ನು
ಎಲ್ಲರ ದಾಹ ನೀಗಿಸುವ ನೀರು
ಝುಲ ಝುಲನೇ ಹರಿಯುವ ನೀರು
ಒಂದು ಬಿಂದು ನೀರು

ನರೇಶ್ ಟಿ

# ಯಶಸ್ವಿ



ಪ್ರೀತಿ ಪ್ರೇಮದ ಬಯಕೆ
ಬಿಚ್ಚಲಾಗದ ಕುಣಿಕೆ
ಸಿಗುವ ಸುಖವು ಕ್ಷಣಿಕ
ಉಳಿದವು ಎಂದೆಂದಿಗೂ ಮರುಕ

ಬೀಳದಿರಿ ಮೋಸದ ಬರೆಯಲ್ಲಿ
ಒದ್ದಾಡುವಿರಿ ಜೀವನವಿಡೀ
ಸರಸ್ವತಿಯ ನೊಲಿಸುವುದೇ ಮುರ್ಖ
ಅಡ್ಡ ದಾರಿಗೆ ತೋರಿ ನಿರ್ಲಕ್ಷ

ಬಾಳಗುರಿಯನು ತಲುಪಿ
ಭರವನಿಳಿಸಿ
ತಾಳಿ ಕೊರಳಿಗೆ ತೊಡಿಸಿ
ಪ್ರೀತಿ ಪ್ರೇಮಗಳಿಸಿ
ಅದುವೇ ನಿಮಗೆ ಯಶಸ್ವಿ

ನವ್ಯಶ್ರೀ ಕೆ

# ಮರ

ಹಚ್ಚ ಹಸುರಿನ ಮರ
ಪಚ್ಚ ಪೈರಿನ ಗಿಡ
ನೋಡಲು ಬಲು ಸುಂದರ
ಇದುವೇ ಪ್ರಕೃತಿಯ ವಾರ

ಗಿಡ ಬೆಳೆಯಿತು ಮರವಾಗಿ
ಮರಗಳು ಬೆಳೆಯಿತು ಕಾಡಾಗಿ
ನಮಗೆ ನೀಡಿತು ಫಲ
ಅದನ್ನು ಮಾಡಿದೆವು ದುರ್ಬಲ

ಕಾಡೇ ನಾಡಿನ ಸಂಪತ್ತು
ಇದರಿಂದ ಎಲ್ಲ ಆಪತ್ತು
ಬೆಳೆಸೋಣ ಒಂದು ಮರ
ಕೇಳೋಣ ಒಂದು ವರ



ಶ್ರವಣ್ ಕುಮಾರ್

# ಸಮುದ್ರದ ದಡದಲ್ಲಿ

ಮುಸ್ಸಂಜೆಯ ಸಮಯದಲ್ಲಿ
ಸಮುದ್ರದ ದಡದಲ್ಲಿ
ಹಕ್ಕಿಗಳು ಹಾರುವಲ್ಲಿ
ನಾನೊಮ್ಮೆ ಹೋದೆನು

ಎತ್ತರದ ಮರದ ತುದಿಯಲ್ಲಿ
ಒಣಹುಲ್ಲಿನ ಗೂಡಿನಲ್ಲಿ
ಮರಿ ಪಕ್ಷಿ ಕೂಗುವಲ್ಲಿ
ತಾಯಿ ಹಕ್ಕಿ ಹಾರಿ ಹೋಯಿತು

ಹೊಂಬಣ್ಣದ ಆಕಾಶ ಇರುವಲ್ಲಿ
ಸಮುದ್ರದ ಬದಿಯಲ್ಲಿ
ರಕ್ತವರ್ಣದ ಚೆಲುವಲ್ಲಿ
ಸೂರ್ಯಾಸ್ತಮವಾಯಿತು

ಸ್ನೇಹ ಎಂ.ವಿ




# ನಮ್ಮ ಹೆಮ್ಮೆಯ ಭಾರತ

ವೈವಿಧ್ಯತೆಗಳ ಈ ನಾಡು
ಸುಸಂಸ್ಕೃತಿಯಿರುವ ಈ ಬೀಡು
ಅದುವೇ ನಮ್ಮ ಭಾರತವು
ನಮ್ಮೆಲ್ಲರ ಈ ಹೆಮ್ಮೆಯ ನೆಲವು

ಜಾತಿ ಮತದ ಬೇಧವಿಲ್ಲದೆ
ಹರಡಿದೆ ಸಮೃದ್ಧಿಯು ಎಲ್ಲಡೆ
ಸರ್ವ ಮತಗಳ ಸಂಗಮವು
ಈ ಪುಣ್ಯ ನೆಲೆಯಲ್ಲಿ ನೆಲೆಸಿಹವು

ತೊಲಗಲಿ ಜನರೊಳಗಿನ ಬಿಕ್ಕಟ್ಟು
ಬೆಳೆಯಲಿ ಭಾರತೀಯರೆಂಬ ಒಗ್ಗಟ್ಟು
ಮೇಲೇರಲಿ ಅಭಿವೃದ್ಧಿಯ ಸಂಕೇತವು
ಹಾರುತ ಇರಲಿ ಹೆಮ್ಮೆಯ ಭಾವುಟವು

ಸುಪ್ರೀತ ಪಿ.ಎಸ್



# ಮುದ್ದಿನ ಅಮ್ಮ

ಅಮ್ಮ ಅಮ್ಮ ನನ್ನಮ್ಮ
ಲಾಲಿ ಹಾಡನ್ನು ಹಾಡುತ್ತಾ
ಬೆಳೆಸಿದ ನನ್ನಮ್ಮ
ಆಟವ ಪಾಠವ ಕಳಿಸಿದ ನನ್ನಮ್ಮ

ಪ್ರೀತಿಯ ಕೊಟ್ಟು
ಮುದ್ದಿನ ಕೊಡುವ ನನ್ನಮ್ಮ
ಹೊಸ ಹೊಸ ಅಂಗಿಯ ತೆಗೆದು
ಸಂತೋಷ ಕೊಡುವ ನನ್ನಮ್ಮ

ಬುದ್ದಿಯ ಕಲಿಸುತ್ತ
ಕಷ್ಟದಿಂದ ಬೆಳೆಸಿದ ನನ್ನಮ್ಮ
ಅಮ್ಮ ಅಮ್ಮ ನನ್ನಮ್ಮ

ಸುಶ್ಮಿತ



# ರೈತ

ರೈತನು ಹೋದನು ಗದ್ದೆಯಲಿ
ಊಳಿದ ಗದ್ದೆಯ ನೇಗಿಲಲಿ
ಮಳೆಯದು ಬಂದಿತು ಸುಗ್ಗಿಯಲಿ
ಬೀಜವ ಬಿತ್ತಿದ ಸಂತಸದಲ್ಲಿ

ಮೊಳಕೆ ಬಂದಿತು ಭತ್ತಗಳು
ಕಿತ್ತರು ಹಲವರು ನೇಜಿಗಳು
ನೆಟ್ಟರು ನೇಜಿಯ ಸಾಲಾಗಿ
ವರವದು ಸಿಕ್ಕಿತು ಮಳೆಯಾಗಿ

ಕೃಷಿಕನ ಸಂತಸ ತೆನೆಯಲ್ಲಿ
ರೈತಗೆ ಉತ್ಸವ ಕೊಯ್ಲಲ್ಲಿ
ರೈತನು ಉಂಡನು ಶಾಂತಿಯಲಿ
ಹೊಸದಕ್ಕಿಯ ಔತಣ ಸಂಭ್ರಮದಲ್ಲಿ

ವಿಜೇಶ್



## ಪ್ರಕೃತಿ

ಹಚ್ಚ ಹಸುರಿನ ನಾಡಿದು
ದಟ್ಟ ಕಾಡುಗಳ ಊರಿದು
ಬೆಟ್ಟ ಗುಡ್ಡಗಳು ಹಿನ್ನೆಲೆಯಲ್ಲಿ

ಆಗಸದ ನೀಲಿಯಲ್ಲಿ
ಹಕ್ಕಿಗಳು ಹಾರುವಲ್ಲಿ
ಸುಂದರದ ನೋಟವದು ಪ್ರಕೃತಿ

ಮುಂಗಾರು ಸುರಿಯುತ್ತಿದೆ
ತಂಗಾಳಿ ಬೀಸುತಿದೆ
ಹಚ್ಚ ಹಸುರಿನ ಬೀಡಿದು ಪ್ರಕೃತಿ

ಮೋಕ್ಷಿತ್ ಬಿ



# ಆ ರಾತ್ರಿಯಲಿ

ನಿದಿರೆಯಲಿ ಮುಳುಗಿದ್ದೆ
ಕನಸ ಕಾಣುತ
ಎಚ್ಚರಿಸಿತು ಮೈ ಸವರಿ
ಆ ಮಂದ ಮಾರುತ

ನುಸುಳಿದ ತಂಗಾಳಿ
ಮನಕೆ ನೀಡಿದೆ ಹಿತ
ಕಣ್ಣಾಡಿಸೆ ಹೊರಗೆ
ಕಂಡೆನಾದ್ಭುತ

ನಲಿದು ನಗುತ್ತಿತ್ತು ನಿಸರ್ಗ
ಗೆಳೆಯನ ಜತೆ ಗೂಡುತ
ತೆಂಗುಗಳು ತಲೆ ಬಾಗಿ
ಮಾಡೆ ಬೆಳದಿಂಗಳ ಸ್ವಾಗತ

ನಿಧಿಶ್ರೀ



# ಆಸೆ

ಬಂದಿದೆ ಬಂದಿದೆ ವಸಂತಮಾಸ
ಜೀವನ ಸಂವಸ್ಸರದಲ್ಲಿ
ಮಿನುಗಿದೆ ಮನ ನಗುತಿದೆ ಮಂದಹಾಸ
ಮಿಂಚಿನವ ವ್ರೊಳೆನ್ನ ಮುಖದಲ್ಲಿ
ಮನ ಮುರುದುಂಬಿಯು ಹಾರುತಲಿಹುದು
ಹೊಮ್ಮ ಹೊವಿಗೊ ಸೊಬಗರಸಿ
ಸಂತಸದಲಿ ಮನ ಹಗುರಾಗುವುದು

ತುಟಿ ಕಂಪಿಸದೆ ಹಾಡಳೆನಿಸಿ
ದುಂಬಿ ಕುಸುಮಗಳ ಮಿಲನವನು ಕಂಡು
ದುಂಬಿಯು ನಾನಾಗ ಆಶಿಸಿದೆ
ಗಗನದಿ ಹಾರುವ ಹಕ್ಕಿಗಳ ಕಂಡು
ಕಂಡು ಸಹಚರಿಸು ಆಶಿಸಿದೆ
ಮರಗಳ ನವನದ ಕುಡಿಗಳ ಕಂಡು
ನವಜೀವನ ನಡೆಸುವ ಆಸೆ
ಬೀಸುವ ಗಾಳಿಯ ತಂಪನು ಉಂಡು
ಈ ಹೊಸ ನವಯುಗದಲ್ಲಿ ನಲಿದಾಡಿದೆನು

ಮಂಜೇಶ್ ಕೆ



# <u>ದೇವ ವರ</u>

ದೇವರ ವರದಂತೆ
ಮುತ್ತಿನ ಹನಿಯಂತೆ
ದೇವೆಕಿರೀಟದಿಂದುದುರಿದ ಬೆಳ್ಳಿಯಂತೆ
ಭೂಮಣ್ಣನ್ನು ತಲುಪಿತು ಮಳೆಹನಿಗಳು

ಜೀವ ಹನಿಗಳಂತೆ
ಸುಗಂಧ ಕಣಗಳಂತೆ
ಜೀವ ಕೊಡವ ತಾಯಿಯಂತೆ
ಭೂದೇವಿಯನು ಸ್ಪರ್ಶಿಸಿತು ಮಳೆ ಬಿಂದುಗಳು

ಅಮೃತದಂತೆ
ತುಳುಕಿದ ಹಾಲಿನಂತೆ
ಭೂದೇವಿಯನು ಮೀಯಿಸುವಂತೆ
ತಲುಪಿತು ಭೂಮಾತೆಯ ಎಡೆಗೆ

ಸಾರ್ಥಕ್ ರಾಜ್ ಎಂ ಎಸ್



## ಮಗು

ಹುಟ್ಟಿದ ಮೇಲೆ ಲೋಕವ ಅರಿತು
ಬಯಸಿದಾಗಲೇ ಎಲ್ಲಾವ ಕಲಿತು
ನಾವಿರುವೆವು ಮಗುವಾಗಿ

ಕಷ್ಟ ಬಂದರೆ ಹೇಳಲು ಆಗದ
ಹಸಿವೆಯಾದರೆ ಬಳಲು ಕೂಡದ
ಇದೆಲ್ಲವ ಅರಿತು ನಾವು

ಮೆಲ್ಲ ಮೆಲ್ಲನೆ ನಡೆಯಲು ಕಲಿತು
ಮುದ್ದು ಮುದ್ದಾಗಿ ಆಟವ ಕಲಿತು
ಒಳ್ಳೆಯ ಪಠವ ಕಲಿಯುತಲಿ

ಅಮೃತ.ಯಂ

# ಸಂಜೆಯು ಮೌನ

ಸಂಜೆಯು ಸಮಯ
ಕರಗಿತು ಹೃದಯ
ಆ ಸುಂದರ ಸೂರ್ಯನ ನೋಡಿ
ಸಂಜೆಯು ಸಮಯದಿ ಹಕ್ಕಿಗಳ ಕೂಗು
ಕೇಳಲು ಬಹಳ ಸುಂದರ
ಸಂಜೆಯು ಸಮಯದಲಿ ತಂಪಾದ ಗಾಳಿಯು
ಆಕಾಶದಿ ಮೋಡವು ಬೆಳ್ಳಿ ಬಟ್ಟಲಂತಿದೆ
ಕಣ್ಣಿಗೆ ಮನೋಹರ ವೆನ್ನಿಸುತ್ತಿದೆ
ಮುಸ್ಸಂಜೆಯು ಸೊಬಗು ರೋಮಾಂಚನವಾಗಿದೆ

ಶರಣ್ಯ.ಕೆ

# ಮುಸ್ಸಂಜೆ ವೇಳೆಯಲಿ

ಮುಸ್ಸಂಜೆ ವೇಳೆಯಲಿ
ಹೂ ಬಾಡೋ ಸಮಯದಲಿ
ಪರಿಮಳ ಮಾಯವಾಗುವ ಸಮಯವ್ರೋ...
ತಾಂಪದ ಗಾಳಿಯಲಿ
ತೇಲಡುವ ಮನಸಿನಲ್ಲಿ
ಬಿಟ್ಹೋಗಲು ಯಾಕೆ ಇಂಗು ಖುಷಿಯಿಲ್ಲ
ಜೋತೆ ಇರೋ ನೆರಳಿಗು ಕೂಡ ಖುಷಿಯಿಲ್ಲ
ಬೆಟ್ಟದ ತುದಿಯಲ್ಲಿ ಕಿತ್ತಳೆ ಬಣ್ಣದ
ಸೂರ್ಯನು ನೋಡಲು ಅಂದ ಚಂದ
ನಡೆದಾಡುವಾಗ ಕಿವಿಗೆ ಝುಲ್ಲೆಂದು
ಗಾಳಿಯ ನಿನಾದ
ಅಲ್ಲೊಂದು ಇಲ್ಲೊಂದು ಹಕ್ಕಿಗಳ ನಿನಾದ
ಸೂರ್ಯ ಹೋಗಿ ಚಂದ್ರ ಬರುವ ಸಮಯದಲ್ಲಿ
ನವಿಲಿನ ಕೇಕೆಯ ಕೇಳಲು ಚಂದ

ವೈಷ್ಣವಿ

# ಆಲಯ

ನಾನು ನೋಡಿದ ಮೊದಲ ಆಲಯ
ಅದುವೆ ನನ್ನ ದೇವಾಲಯ
ಅದುವೆ ನನ್ನ ಮೆಚ್ಚಿನ ಶಾಲೆ||೧||

ಎಲ್ಲರೊಂದಿಗೂ ಆಟವಾಡಿ
ಎಲ್ಲರೊಂದಿಗೂ ಒಟ್ಟು ಗೂಡಿ
ಕಲಿಯುವ ಸ್ಥಳವೇ ನನ್ನ ಶಾಲೆ||೨||

ನನಗೆ ಕಲಿಸುವ ನನ್ನ ಗುರು
ನಾನು ನೋಡಿದ ನನ್ನ ಭೋದಕರು
ನಾನು ನೋಡಿದ ಮೊದಲ ಶ್ರೇಷ್ಠರು||೩||

ಹಲವು ಕೋಣೆಗಳು ತುಂಬಿದ ಶಾಲೆ
ಜ್ಞಾನದಿಂದ ತುಂಬಿರುವ ಶೃಂಖಲೆ
ಅದುವೆ ನನ್ನ ಪಾಠ ಶಾಲೆ||೪||

# ನದಿಯ ನೋಡಿ ಕಲಿ ಹೇ ಮನುಜ

ಬೆಟ್ಟದ ಮಡಿಲಲಿ ಜನಿಸುವ
ಝುಳು ಝುಳು ಎನ್ನುತ ಹರಯುವ ನದಿಯೆಲ್ಲಿ
ನಿ ಸ್ವಾರ್ಥಿಯಾದ ನಿನ್ನಲ್ಲಿ ಪುಚ್ಚ ಸಹಾಯವನ್ನೂ
ಅಪೇಕ್ಷಿಸುವ ಸ್ವಾರ್ಥಿ ಹುಲು ಮಾನವನೆಲ್ಲಿ

ಬೆಟ್ಟದ ಎಡೆಯಲ್ಲಿ ಸರಸರನೆ ಕೆಳಗಿಳಿದು
ಗಿರಿಗಳ ನಮಿಸುವ ನದಿಯೆಲ್ಲಿ
ತಾಯಿಯ ಒಡಲ ತೊರೆದು ಬೇಗನೆ ಬೆಳದು
ತಾಯಿಯ ತೊರೆವ ಹುಲು ಮಾನವನೆಲ್ಲಿ

ಕಲ್ಲನು ಮಣ್ಣನು ಕೊಚ್ಚುತ ನಡೆವೆ
ಧುಮುಕುತ ಬಳಕುತ  ಸಾಗುವೆ
ಜಲವನು ಒದಗಿಸಿ ಜೀವವ ನೀಡುವ
ನದಿಯ ನೋಡಿ ಕಲಿ ಹೇ ಮನುಜ

ಜನಗಳ ಮನವನು ಗೆಲ್ಲುವೆ
ನೀಲಿಯ ಕಡಲನು ಸೇರುವೆ
ಕಪಟವಿಲ್ಲದ ನದಿಯ ಸೇವೆಯ
ಅರಿತು ನಮಿಸು ಹೇ ಮನುಜ

ದಿಶಾ.ಪಿ.ಎಸ್
9A ತರಗತಿ

# _ಮಕ್ಕಳು

ಮಕ್ಕಳೆಂದರೆ ಚಂದ
ಅವರ ಆಟವು ಅಂದ
ಅವರ ನಗುವು
ಅವರ ಅಳುವು
ಸೂರ್ಯನ ಬಿಂಬದಂತೆ

ನೇತಾಜಿ ತಿಳಿಸಿದ್ದಾರೆ
ಮಕ್ಕಳೇ ಮನೆಗೆ ಮಾಣಿಕ್ಯ
ಅವರು ಹೇಳಿದ್ದಾರೆ
ಇಂದಿನ ಮಕ್ಕಳೇ ಮುಂದಿನ ಜನಾಂಗ

ಭೇಧ-ಭಾವ ಬೇಕೆ ನಮ್ಮಲ್ಲಿ
ಆದರೂ ಉಂಟು ಭೇಧ-ಭಾವ ಎಲ್ಲರಲಿ
ಬೇಡ ಭೇದ-ಭಾವ
ಎಲ್ಲರೂ ಬಾಳಿರಿ ಸುಖವಾಗಿ

ಸುಜ್ಞ.ವೈ ೯.ಎ

# ಮಕ್ಕಳು

ಮಕ್ಕಳೆಂದರೆ ಚಂದ
ಅವರ ಆಟವು ಅಂದ
ಅವರ ನಗುವು
ಅವರ ಅಳುವು
ಸೂರ್ಯನ ಬಿಂಬದಂತೆ

ನೇತಾಜಿ ತಿಳಿಸಿದ್ದಾರೆ
ಮಕ್ಕಳೇ ಮನೆಗೆ ಮಾಣಿಕ್ಯ
ಅವರು ಹೇಳಿದ್ದಾರೆ
ಇಂದಿನ ಮಕ್ಕಳೇ ಮುಂದಿನ ಜನಾಂಗ

ಭೇಧ-ಭಾವ ಬೇಕೆ ನಮ್ಮಲ್ಲಿ
ಆದರೂ ಉಂಟು ಭೇಧ-ಭಾವ ಎಲ್ಲರಲಿ
ಬೇಡ ಭೇದ-ಭಾವ
ಎಲ್ಲರೂ ಬಾಳಿರಿ ಸುಖವಾಗಿ

ಸುಜ್ಞ.ವೈ ೯.ಎ

# ಜವಹರಲಾಲ್ ನೆಹರು

ಜವಹರಲಾಲ್ ನೆಹರೂರವರ ಪೂರ್ವಜರ ಹೆಸರು ರಾಜಕೌಲ ಎಂಬ ಹೆಸರಿತ್ತು.ಇವರ ತಂದೆ ಮೋತಿಲಾಲ್.ತಾಯಿ ಸ್ವರೂಪರಾಣಿ.ನವೆಂಬರ್೧೪ ನಮ್ಮ ದೇಶದ ಒಬ್ಬ ಮಹಾಪುರುಷರಾದ ಜವಹರಲಾಲ್ ನೆಹರೂರವರ ಜನ್ಮದಿನ. ಅಂದು ಭಾರತದಲ್ಲೆಲ್ಲಾ ಮಕ್ಕಳ ದಿನ ಎಂದು ಸಂಭ್ರಮದಿಂದ ಆಚರಿಸುತ್ತೇವೆ. ಇವರನ್ನು "ಚಾಚ' ಎಂದು ಕರೆಯುತ್ತಿದ್ದರು.ಚಾಚ ಎಂದರೆ ಚಿಕ್ಕಪ್ಪ ಎಂದರ್ಥ.ಜವಹರಲಾಲ್ ನೆಹರೂರವರಿಗೆ ಮೊದಲಿನಿಂದಲೂ ಮಕ್ಕಳೆಂದರೆ ಬಹಳ ಪ್ರೀತಿ.ಸ್ವತಂತ್ರ ಭಾರತದ ಪ್ರಧಾನಮಂತ್ರಿಯಾಗಿ ದಿನವಿಡೀ ದುಡಿತವಿದ್ದಾಗಲೂ ಮಕ್ಕಳೊಡನೆ ಆಡುವ ಪ್ರಸಂಗ ತಪ್ಪಿಸುತ್ತಿರಲಿಲ್ಲ."ನಿಜವಾದ ಜವಾಹರಲಾಲ್ ನೆಹರೂರವರರನ್ನು ನೋಡಬೇಕಾದರೆ ಅವರು ಮಕ್ಕಳೊಂದಿಗೆ ಇರುವಾಗ ನೋಡಬೇಕು.ಮಕ್ಕಳಂತೆಯೇ ಮಾತಾಡಿ,ಅವರ ಹಾಗೆಯೇ ಆಟವಾಡಿ ನಲಿಯುತ್ತಾರ' ಎಂದು ಅವರ ತಂಗಿ ಶ್ರೀಮತಿ ವಿಜಯಲಕ್ಷ್ಮೀ ಹೇಳಿದ್ದಾರೆ. ಜವಹರಲಾಲ್ ನೆಹರೂರವರಿಗೆ ಮಕ್ಕಳೆಂದರೆ ಬಹಳ ಪ್ರೀತಿ.ಅವರು ಅನಾಥ ಮಕ್ಕಳು ಕೊಟ್ಟ ಗುಲಾಬಿಯನ್ನು ಜೇಬಿಗೆ ಅಂಟಿಸಿ ಸಂತೋಷಪಡುತ್ತಾರೆ. ನಮ್ಮ ದೇಶದ ಉನ್ನತಿಗಾಗಿ ಚಾಚ ನೆಹರು ಕೊಟ್ಟ ಮಂತ್ರವೆಂದರೆ "ಆರಾಮ್ ಹರಾಮ್ ಹೈ'ನಾವು ಎಂದಿಗೂ ಸೋಮಾರಿಗಳಾಗಬಾರದೆಂಬುದೇ ಈ ಮಂತ್ರದ ಅರ್ಥ.೧೯೬೪ರ ಮೇ ೨೭ರಂದು ನಿಧನರಾದರು.

ಫಾತಿಮತ್ತ್ ರೈಹಾನ ೯ ಕೆ

# ಜೀವನ

ಜೀವನವೆಂಬುದು ಆಟವಲ್ಲ
ಜೀವನವಂಬುದು ಜಾದುವಲ್ಲ
ಜೀವನವೆಂದರೆ ಏನೆಲ್ಲ ?||೧||

ಸುಖ ದುಃಖಗಳ ಸಾಗರವದು
ಕಸಕಡ್ಡಿಗಳ ಬುಟ್ಟಿಯದು
ಯಾಕಾಯಿತು ಹೀಗಿದು?||೨||

ಭೂಮಿಯ ಲಿ ಜೀವಜಾಲವಿದೆ
ಸೌರ ಮಂಡಲದಲಿ ಗ್ರಹಗಳಿದೆ
ಜೀವನದಲ್ಲಿ ಏನೇನಿದೆ ?||೩||

ಸುಖ ದುಃಖಗಳ ಹೊಮ್ಮುಟವಿದೆ
ಸಿಹಿ ಕಹಿಗಳ ಹೋರಾಟವಿದೆ
ಏನೇನೋ ಆಗುತಿದೆ||೪||

ಸುಖವೆಂಬ ಜೀವನದಲಿ
ದುಃಖವೆಂಬ ಕಾರಣವಿರುವಲಿ
ಮರಣವೆಂಬ ದಾರಿಯಿದೆ||೫||

ಯಾಕೆ ಯಾರಿಗೂ ತಿಳಿಯದು
ಜೀವನವೆಂಬುದು ಬೇವೆಂದು
ಜೀವನವೆಂಬುದು ಬೆಲ್ಲವೆಂದು||೬||

ದೀಕ್ಷಿತ.ಜಿ .೯.ಎ

# ತರೆದಿಟ್ಟ ಕಿಟಿಕಿ

ಒಂದು ಪುಟ್ಟ ಊರನಲ್ಲಿ ತುಂಬಾ ಮಕ್ಕಳಿದ್ದರು.ಅವರೆಲ್ಲರು ಒಂದು ಸ್ಥಳದಲ್ಲಿ ಆಟ ಆಡುತ್ತಿದ್ದರು. ಹಾಗೇ ಒಂದು ದಿವಸ ಎಲ್ಲರೂ ಕಣ್ಣಾಮುಚ್ಚಳೆ ಆಟಆಡುವಾಗ ಪಿಂಕಿ ಒಂದು ಮನೆಯ ಕಿಟಿಕಿಯ ಕೆಳಗೆ ಅಡಗಿದಳು. ಅಲ್ಲಿ ಅವಳಿಗೆ ಒಂದು ಶಬ್ದ ಕೇಳಿಸಿತು.ಅವಳು ಆ ಕಿಟಿಕಿಯನ್ನು ನೊಡಳು ಎಂದು ಎದ್ದಾಗ ರಾಮು ಬಂದು ಪಿಂಕಿ ಔಟ್ ಎಂದನು.ಹಾಗೇ ಸಂಜೆಯಾಗಿ ಎಲ್ಲರೂ ಮನೆಗೆ ಹೋದರು.ಅವಳ ಮನಸಲ್ಲಿ ಆ ಮನೆಯ ಒಳಗೆ ಯಾರು ಇರುಬಹುದೆಂದು ಯೋಚಿಸುತ್ತಾ ಇದ್ದಳು.

ಬೆಳಗ್ಗೆ ಆದಾಗ ಅವಳು ಶಾಲೆಗೆ ಹೋದಳು.ಶಾಲೆಯಿಂದ ಬರುವಾಗ ಆ ಮನೆಗೆ ಅವಳು ಮತ್ತು ಗೆಳತಿಯರು ಹೋಗಿ ನೋಡಿದರು.ಆಗ ಆ ಕಿಟಿಕಿಯ ಒಳಗಿನಿಎಂದ ಒಂದು ಹುಡುಗಿ ಕೂಗುವುದನ್ನು ಅವರು ನೋಡಿದರು.ಅವಳೂಡನೆ ಪಿಂಕಿ ಕೇಳಿದಳು "ನೀನು ಯಾಕೆ ಕೂಗುತ್ತಿದ್ದಾಯಾ "ಎಂದು ಕೇಳಿದಾಗ ಅವಳು "ನನ್ನ ಅಪ್ಪ ಅಮ್ಮ ನನ್ನನ್ನು ಇಲ್ಲಿ ಬಿಟ್ಟು ಕೆಲಸಕ್ಕೆ ಹೋಗಿದಾರೆ" ಎಂದಳು. ಆಗ ಪಿಂಕಿ "ನಿನಗೆ ನಮ್ಮೊಟ್ಟಿಗೆ ಆಟಆಡಳು ಆಸೆ ಇದೆಯೇ " ಎಂದು ಕೇಳಿದಳು. ಆಗ ಅವಳು ಇದೆ ಎಂದಳು.ನಂತರ ಅವಳ ಅಮ್ಮ ಅಪ್ಪ ಬಂದಾಗ ಅವರೊಡನೆ ಪಿಂಕಿ ಮತ್ತು ಅವಳ ಗೆಳೆಯರು "ಇವಳನ್ನು ನಮ್ಮೊಟ್ಟಿಗೆ ಆಟಆಡಳು ಬಿಡುತ್ತೀರ" ಎಂದರು.ಆಗ ಅಮ್ಮ ಅಪ್ಪ "ಆಯಿತು ನಾನು ಅವಳನ್ನು ನಿಮ್ಮೊಟ್ಟಿಗೆ ಆಟಆಡಳು ಬಿಡುವ" ಎಂದರು.ಹಾಗೆ ಎಲ್ಲರು ಖುಷಿಯಿಂದ ಒಟ್ಟಿಗೆ ಆಟಆಡಿದರು.

ಮುಫೀದ.ಎಂ

## അമ്മയുടെ സ്വാതന്ത്ര്യം

ഉറൂബിന്റെ ചെറുകഥകളിൽ ഒന്നാണ് 'അമ്മയുടെ സ്വാതന്ത്രം'.അമ്മയുടെ നിസ്സഹായവസ്ഥയാണ് ഈ രചനയിൽ പറയുന്നത്. ഒരമ്മയ്ക്കും ഈ ഗതി വരരുതെ എന്ന് ഏതൊരു വായനക്കാരനും ഒരിക്കലെങ്കിലും ചിന്തിക്കും എന്ന് ഉറപ്പാണ്.

ഒരമ്മ താൻ നൊന്തു പെറ്റ മക്കളെ വളർത്തി വലുതാക്കാൻ പെടുന്ന കഷ്ടപ്പാടുകളാണ് ഈ കഥയിൽ പറയുന്നത്.മുസ്ലീം സമുദായത്തിലെ സൈനബ എന്ന സ്ത്രീയുടെ കഥയാണിത്. ചെറു പ്രായത്തിൽ തന്നെ വിവാഹിതയാവുന്ന ഈ സ്ത്രീ വളരെ സുന്ദരിയായിരുന്നു.ബന്ധുക്കളായി ആരും ഈ സ്ത്രീക്ക് ഉണ്ടായിരുന്നില്ല.പിന്നീട് ഭർത്താവ് ഇവരെ ഉപേക്ഷിക്കുകയുണ്ടായി.മക്കളെയും കൊണ്ട് നടുറോടിലിറങ്ങിയ സൈനബ തികച്ചും നിസ്സഹായയായി.ജീവിക്കാൻ വേണ്ടി അവൾ പലതും ചെയ്ത് കൂട്ടുന്നു.അവസാനം വിശപ്പ് സഹിക്കാനാവാതെ കടവരാന്ത കയറിയിറങ്ങി യാചിക്കാൻ പോകുന്നു.ഒന്നിലധികം വിവാഹം കഴിക്കുന്നത് മുസ്ലീം സമുദായത്തിലെ സർവസമാണ്. സൈനബയ്ക്കും ഇതേ

അവസ്ഥ തന്നെ തന്റെ ഭർത്താവിൽ നിന്നും അനുഭവിക്കേണ്ടി വന്നു.മൂത്ത രണ്ട് കുട്ടികൾ ഒടുവിൽ ഭിക്ഷാടനത്തിന് പോകുന്നു. പിന്നീട് സൈനബയും പിഞ്ച്ചു കുഞ്ഞും കടവരാന്തയിൽ ഇരിക്കുന്നു. മുലപ്പാൽ കിട്ടാതെ ആ കുട്ടി കരഞ്ഞു നിലവിളിക്കാൻ പോലുമാകാതെ വിങ്ങിപൊട്ടുന്നു.ഇതു കേട്ട് സൈനബയും നിസ്സഹായയാകുന്നു. എല്ലാ വഴികളും അടഞ്ഞ് സൈനബ പിഞ്ച്ചു കുഞ്ഞിന്റെ ജീവൻ സ്വന്തം കൈയ്യാലെ തന്നെ ഇല്ലാതാക്കുന്നു. ജീവൻ പകർന്നു കൊടുത്ത അമ്മ തന്നെ ആ കുഞ്ഞിന്റെ ജീവൻ ഇല്ലാതാക്കുന്നു.തെരുവിൽ ഭർത്താവ് ഉപേക്ഷിച്ച ഒരു സ്ത്രീയുടെ ജീവിത കഥയാണിത്. ഇന്നത്തെ സമൂഹസ്ഥിതിയുമായി ഈ കഥയ്ക്ക് ഒരുപാട് സാമ്യതയുണ്ട്. സാഹചര്യമാണ് ഒരു മനുഷ്യനെ പലതിനും പ്രേരിപ്പിക്കുന്നത്. ഉറൂബിന്റെ കഥകൾ സാമൂഹ്യ പ്രതിബന്ധത ഉള്ളതാണ്.

സുസ്മിത.എം.എസ്

# ಸುವರ್ಣ ನಾಡು

ಸೂರ್ಯನು ಬಂದ ಬೆಳಕನ್ನು ತಂದ
ಹಾರುತ್ತ ಬಂದವು ಹಕ್ಕಿಗಳಂದ
ಚಿಲಿಪಿಲಿ ಗುಟ್ಟುತ ಹಾರಿದವು
ನೀಲಾಕಾಶ ನೊಡಿದವು

ಹೂಗಳು ಎಲ್ಲಾ ಅರಳಿದವು
ದುಂಬಿಗಳಾಡುತ್ತ ಬಂದವು
ಜೇನನು ಸೇವಿಸಿ ಹಾರಿದವು
ಹೂಗಳು ಅದನ್ನು ನೋಡಿದವು

ಮಕ್ಕಳು ಆಡುತ್ತ ಬಂದರು
ಹೂವನ್ನು ನೋಡಿ ನಿಂತರು
ಹ,ಹ,ಹ,ಹ ಎಂದು ನಗಾಡಿದರು
ಹೂವನ್ನು ಕೊಯ್ದು ಸುಡಿದರು

ಮನೀಶ್

# ಒಗಟ್ಟಿನ ಮಕ್ಕಳು

ಮಕ್ಕಳೇ ಮಕ್ಕಳೇ ಒಗಟ್ಟಿನಿಂದ ಬಾಳೋಣ
ಎಲ್ಲರೊಂದಿಗೆ ಪ್ರೀತಿಯನ್ನು ಬೆಳೆಸೋಣ
ಎಲ್ಲರೂ ಒಗಟ್ಟಿನಿಂದ ಜೀವಿಸೋಣ
ಮಕ್ಕಳೇ ತಂದೆ ತಾಯಿಯಲ್ಲಿ ಪ್ರೀತಿಯನ್ನು ಮೂಡಿಸುವ
ಮಕ್ಕಳೇ ನವಂಬರ್ ೧೪ರಂದು ಮಕ್ಕಳ ದಿನಾಚರಣೆ ಆಚರಿಸುವ
ಮಕ್ಕಳೇ ಮಕ್ಕಳೇ ಎಲ್ಲರೊಂದಿಗೆ ಸೌಹಾರ್ದತೆಯನ್ನು ಬೆಳೆಸೋಣ
ಎಲ್ಲರೊಂದಿಗೆ ಪ್ರೀತಿಯಿಂದ ಜೀವಿಸೋಣ
ಎಲ್ಲರೂ ಭಾರತದಲ್ಲಿ ಪ್ರೀತಿಯಿಂದ ಇರೋಣ
ಮಕ್ಕಳೇ ಎಲ್ಲರೂ ಒಂದಾಗಿಯಿರಿ
ಎಲ್ಲರಲ್ಲಿಯೂ ಪ್ರೀತಿಯನ್ನು ಬೆಳೆಸೋಣ
ಎಲ್ಲರೂ ಭಾರತದಲ್ಲಿ ಒಂದಾಗಿಯಿರಿ
ಎಲ್ಲರೂ ಒಗಟ್ಟಿನಲ್ಲಿ ಇರೋಣ

ಶ್ರೀಹರಿ.ಎ.ಕೆ

# ನೆಹರು

ನಮ್ಮ ವೀರನಾದ ಸ್ವಾತಂತ್ರ್ಯ ಹೋರಾಟಗಾರನೇ ನಿನಗೆ ವಂದನೆ
ನಮ್ಮ ದೇಶವನು ತಿರುಗಿ ಪಡೆಯುತ ಪ್ರಜಾಗಳಿಗೆಲ್ಲ ಸ್ವಾತಂತ್ರ ನೀಡುತ್ತಾ
ವೀರನಾದ ನೆಹರು
ಮಕ್ಕಳ ಹೃದಯುದಲಿ ನೀನು ಇದ್ದೀ ನೆಹರು
ನಿಮ್ಮ ಹೃದಯುದಲ್ಲಿ ಮಕ್ಕಳು ಇದ್ದಾರೆ
ಮಕ್ಕಳ ಪ್ರೀತಿಯ ನೆಹರು
ಭಾರತ ದೇಶದ ನಾಯಕ
ಮಕ್ಕಳೇ ಮನೆಗೆ ಮಾಣಿಕ್ಯ ಎಂದು ತಿಳಿದವರು ನೀವು
ವೀರನಾದ ನಮ್ಮ ನೆಹರು

ವಿಷ್ಣು ಪ್ರಸಾದ್.ಸಿ

# ಮುಸ್ಸಂಜೆ

ಈ ಸಂಜೆ ಏಕೆ ಜಾರುತ್ತಿದೆ
ಇಷ್ಟು ಬೇಗ ಯಾಕೆ ಜಾರುತ್ತಿದೆ
ಸಂಜೆಯ ಚಂದವು ಇಷ್ಟು ಬೇಗ
ಏಕೆ ಮುಗಿಯುತ್ತಿದೆ

ಬೆಟ್ಟದ ತುದಿಯಲ್ಲಿ ಕಿತ್ತಲೆ ಬಣ್ಣದ
ಸೂರ್ಯನನ್ನು ನೋಡಲು ಎಷ್ಟು ಚಂದ
ಮೋಡ ಮುಸುಕಿದ ಬಾನು
ಕಿತ್ತಲೆ ಬಣ್ಣದಿ ಕಾಣುಲು ಎಷ್ಟು ಚಂದ

ನದಿಯ ನೀರು ಜುಳು ಜುಳು
ಎನ್ನುವ ನಿನದ ಮನಸಿಗೆ ತರುವುದು ಆನಂದ
ಕಿತ್ತಲೆ ಬಣ್ಣದ ಪ್ರಕೃತಿಯ ನೋಡುವಾಗ
ಮನಸಿಗೆ ತರುವುದು ಆನಂದ

ಕಾವ್ಯಶ್ರೀ.ಎಂ. ಕೆ. ಎ

# ഒരു ചെറുപുഞ്ചിരി

സമീപത്താകെ തിക്കും തിരക്കും. വാഹനങ്ങളൊക്കെ ചീറിപായുന്നതു കാണാം.ആ ബഹളങ്ങൾക്കിടയിൽ ഒരു കുട്ടി റോഡ് കടക്കുന്നതിനായി കഷ്ടപ്പെടുന്നതു ഞങ്ങൾ കാണാനിടയായി. ആ കുട്ടിയുടെ കൈയ്യിലൊക്കെ സ്റ്റിക്കറുകളാണ്.


സമീപത്തുള്ള ഹോട്ടലിലിരിക്കുകയായിരുന്നു ഞാൻ.തൊട്ടപുറത്തിരിക്കുകയായിരുന്നു അവൻ. ഞാൻ അവനോട് പേര് ചോദിച്ചു ഉറച്ച ശബ്ദത്തിലവൻ പറഞ്ഞു ആകാശ് .കുട്ടിയുടെ ചിരിയിലൂടെ ഒരു കുടുംബത്തിലെ ദുരിതത്തെ കണ്ടു. ഞാൻ അവനോട് സ്റ്റിക്കറുക്കളൊക്കെ വാങ്ങിച്ചു.ചിലറയില്ലാതെ ഞാൻ കൊടുത്ത നൂറുരൂപ നോട്ട് കിട്ടിയതു കൊണ്ട് ബാക്കിയും തന്ന് ചെറുചിരി സമ്മാനിച്ച് അവൻ മടങ്ങി.

പെട്ടന്നൊരു നിലവിളി..... കാറ്റിലൂടെ സ്റ്റിക്കറുകളൊക്കെ പാറിക്കളിക്കുന്നുണ്ടായിരുന്നു.വാഹനം ആ കുട്ടിയുടെ ചെറുചിരി മായ്ച്ചുകളഞ്ഞിരുന്നു.എന്നിട്ടുംആ നൂറു രുപ നോട്ടിന് ഒന്നും സംഭവിച്ചിരുന്നില്ല.ആ നോട്ടിലൂടെ കുട്ടിയുടെ ഹൃദയസ്പന്ദനം മുഴങ്ങുന്നുണ്ടായിരുന്നു........

Prajna.k
Aparna.G.Nair

# Digital Painting




UNNI

# കുട നന്നാക്കുന്ന ചോയി

നാട്ടുഭാഷയുടെ തനതു രുചിയും തന്റേടവു മുള്ള കഥയാണ് എം.മുകുന്ദന്റെ "കുട നന്നാ ക്കു ന്ന ചോയി" .നാടൻ ശൈലിയിലാണ് എം.മുകു ന്ദന്റെ രചന.ദാരിദ്രത്താൽ വലഞ്ഞ് ഫ്രാൻ സിലേക്ക് പോകുന്ന ചോയി മാധവന് ഒരു ലക്കോട്ട് കൊടുക്കുന്നു. ലക്കോട്ടിൽ എന്താ ണുള്ളതെന്നറിയാനുള്ള ആകാംക്ഷ നാട്ടുകാ ർക്കുണ്ടാവുന്നു.നാട്ടുകാർക്കൊപ്പം വായനക്കാ രെയും മുൾമുനയിൽ നിർത്തിക്കൊണ്ടാണ് കഥ മുന്നോട്ടു പോകുന്നത്.ചോയിയുടെ മരണാ നന്തരം മാധവൻ ആ ലക്കോട്ട് തുറക്കുന്നു. കഥ യുടെ ആദ്യഭാഗത്ത് ഒരു സാധാരണ നാട്ടിൻപു റത്തുകാരനാണ് ചോയി ,എന്നാൽ കഥാന്ത്യ ത്തിൽ ഭാരതത്തെ സ്നേഹിക്കുകയും അതിന്റെ പാരമ്പര്യത്തിലും സംസ്കാരത്തിലും അഭിമാനം കൊള്ളുകയും ചെയ്യുന്ന ഒരു യുവാവായി ചോയി മാറുന്നു.തന്റെ ആത്മാവിന് ശാന്തി ലഭിക്കണ മെങ്കിൽ തന്റെ മൃതദേഹം കാവി പൊതിഞ്ഞ് ചിതയിലേക്കെടുക്കണം എന്നു പറയുന്നതി ലൂടെ ഒരു മഹാനായി മാറുകയാണ് ചോയി.

വിസ്മയ.എം
9c

# ഹംസധ്വനി

മാധവിക്കുട്ടിയുടെ കഥകൾ എന്നും വായനക്കാരെ ആകർഷിക്കുന്നതുമായ രചനാരീതിയും അർത്ഥതലങ്ങളും സ്നേഹവാൽസല്യത്തിന്റെ വികാരങ്ങൾ തേടുന്നതുമാണ്.സ്നേഹസായൂജ്യത്തിലൂടെയും സ്നേഹരാഹിത്യത്തിലൂടെയും അവ ആവിഷ്കാരങ്ങൾതേടുന്നു.മാധവിക്കുട്ടിയുടെ കഥകളൊക്കെയും വികാരങ്ങളെ അനശ്വരമാക്കുകയാണ്ചെയ്യുന്നത്.മലയാളത്തിന്റെ സുവർണ്ണകഥകൾ എന്ന മാധവിക്കുട്ടിയുടെ സാഹിത്യത്തിലൂടെ നമുക്കറിയുവാൻ സാധിക്കുന്നത് സ്നേഹത്തിന്റെ വ്യത്യസ്തതലങ്ങളാണ്.

"മലയാളത്തിന്റെ സുവർണ്ണകഥകൾ" എന്ന കഥയിൽ നിന്നെടുത്ത ഹംസധ്വനി എന്ന ചെറുകഥയുടെ ആശയം വേർത്തിരിവില്ലത്ത സ്നേഹബന്ധം തന്നെയാണ്.തടാകത്തിൽ കാണപ്പെടുന്ന മനോഹരമായ കാഴ്ച്ചകളെക്കുറിച്ചും 'ഹംസധ്വനി' യിൽ പ്രതിപ്പാദിക്കുന്നു. സ്നേഹത്തിൽ അകപ്പെട്ടവർക്കുവേണ്ടിയുള്ള അവസാനം കാണാത്ത ഈ തേജസ്സ് എന്ന വരിയിലൂടെ ഈ കഥ അവസാനിക്കുമ്പോൾ തടാകവും പ്രകൃതിയും മനുഷ്യരും തമ്മിലുള്ള സ്നേഹബന്ധത്തെയാണ് കഥാകൃത്ത് ഇതിലൂടെ പ്രതിപാദിക്കുന്നത്.

ശരണ്യ.എം

9-സി

# ALBUM





# Little KITEs Team



# ಧನ್ಯವಾದಗಳು